Quizizz

NAME : ____________________

CLASS : ____________________

DATE : ____________________

# 1.ಸಿರಿ ಕನ್ನಡ ನುಡಿ ಬಳಗ: ಪ್ರಥಮ ಭಾಷೆ: ( 'ಕೆಮ್ಮನೆ ಮೀಸೆವೊತ್ತನೇ)

50 Questions

1. 'ಕೆಮ್ಮನೆ ಮೀಸೆವೊತ್ತನೇ' ಪದ್ಯವನ್ನು ಬರೆದ ಕವಿ

- [ ] a) ಲಕ್ಷ್ಮೀಶ
- [ ] b) ಪಂಪ
- [ ] c) ಕುಮಾರವ್ಯಾಸ
- [ ] d) ರನ್ನ

2. ಪಂಪ ಕವಿಯ ಜನ್ಮಸ್ಥಳ

- [ ] a) ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರು
- [ ] b) ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರ
- [ ] c) ಗದಗ ಪ್ರಾಂತ್ಯದ ಕೋಳಿವಾಡ
- [ ] d) ಬಾಗಲಕೋಟೆ ಜಿಲ್ಲೆಯ ಮುದುವೊಳಲು

www.esirikannada.com

3. ಕವಿ ಪಂಪನ ಕಾಲ

- [ ] a) ಕ್ರಿ.ಶ.1550
- [ ] b) ಕ್ರಿ.ಶ.902
- [ ] c) ಕ್ರಿ.ಶ.1430
- [ ] d) ಕ್ರಿ.ಶ.949

4. ಕವಿ ಪಂಪ ಬರೆದ ಕೃತಿಗಳು

- [ ] a) ಜೈಮಿನಿ ಭಾರತ ಮತ್ತು ಪಂಚತಂತ್ರ
- [ ] b) ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ
- [ ] c) ಕರ್ಣಾಟ ಭಾರತ ಕಥಾಮಂಜರಿ ಮತ್ತು ಐರಾವತ
- [ ] d) ಅಜಿತ ತೀರ್ಥಂಕರ ಪುರಾಣ ಮತ್ತು ಸಾಹಸ ಭೀಮವಿಜಯ

5. ಕವಿ ಪಂಪನಿಗೆ ಇದ್ದ ಬಿರುದುಗಳು

- [ ] a) ಉಪಮಾಲೋಲ, ಕರ್ಣಾಟ ಕವಿವಿನೂತನ ಚೈತ್ರ
- [ ] b) ಸರಸ್ವತಿ ಮಣಿಹಾರ, ಕವಿತಾಗುಣಾರ್ಣವ, ಸಂಸಾರ ಸಾರೋದಯ
- [ ] c) ರೂಪಕ ಸಾಮ್ರಾಜ್ಯದ ಚಕ್ರವರ್ತಿ
- [ ] d) ಕವಿಚಕ್ರವರ್ತಿ

6. ಪಂಪಕವಿಗೆ ಆಶ್ರಯ ನೀಡಿದವರು

☐ a) ಚಾಲುಕ್ಯರ ಅರಿಕೇಸರಿ
☐ b) ಇಮ್ಮಡಿ ತೈಲಪ
☐ c) ಚಾಲುಕ್ಯರ ಜಗದೇಕಮಲ್ಲ
☐ d) ಇರಿವಬೆಡಂಗ

7. 'ಕೆಮ್ಮನೆ ಮೀಸೆವೊತ್ತೆನೆ' ಪದ್ಯದ ಆಕರಗ್ರಂಥ

☐ a) ವಡ್ಡಾರಾಧನೆ
☐ b) ಸಾಹಸ ಭೀಮವಿಜಯ
☐ c) ಕರ್ಣಾಟ ಭಾರತ ಕಥಾಮಂಜರಿ
☐ d) ವಿಕ್ರಮಾರ್ಜುನ ವಿಜಯ

8. ಕನ್ನಡದ ಕವಿ ಚಕ್ರವರ್ತಿಗಳು ಯಾರು?

☐ a) ಪೊನ್ನ ರನ್ನ ಜನ್ನ
☐ b) ಪಂಪ ಪೊನ್ನ ರನ್ನ
☐ c) ಪಂಪ ಜನ್ನ ಪೊನ್ನ
☐ d) ಕುಮಾರವ್ಯಾಸ ಲಕ್ಷ್ಮೀಶ ಜನ್ನ

9. ಕನ್ನಡದ ರತ್ನತ್ರಯರು ಯಾರು?

☐ a) ಪೊನ್ನ ರನ್ನ ಜನ್ನ
☐ b) ಪಂಪ ಪೊನ್ನ ರನ್ನ
☐ c) ಕುಮಾರವ್ಯಾಸ ಪಂಪ ಜನ್ನ
☐ d) ಲಕ್ಷ್ಮೀಶ ಪೊನ್ನ ಜನ್ನ

www.esirikannada.com

10. ಪಂಪ ತನ್ನ ಕಾವ್ಯದಲ್ಲಿ ಆಶ್ರಯದಾತ ಅರಿಕೇಸರಿಯನ್ನು ಯಾರಿಗೆ ಹೋಲಿಸಿದ್ದಾನೆ ?

☐ a) ಅರ್ಜುನ
☐ b) ಭೀಮ
☐ c) ಧರ್ಮರಾಯ
☐ d) ದುರ್ಯೋಧನ

11. ದ್ರೋಣ ಮತ್ತು ದ್ರುಪದರ ಗುರುಗಳು

☐ a) ಭೀಷ್ಮಾಚಾರ್ಯ
☐ b) ಯಜ್ಞಸೇನ
☐ c) ಪ್ರಜಾಪತಿ ಕಶ್ಯಪರು
☐ d) ಮತಂಗ ಮುನಿ

12. ದ್ರುಪದನು ತಾನು ದೊರೆಯಾದಾಗ ತನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ ಯಾರಿಗೆ ಹೇಳಿದನು ?

☐ a) ಪರಶುರಾಮರಿಗೆ
☐ b) ಅಶ್ವತ್ಥಾಮನಿಗೆ
☐ c) ದ್ರೋಣಾಚಾರ್ಯರಿಗೆ
☐ d) ಪಡಿಯರನಿಗೆ

13. ದ್ರುಪದ ರಾಜನು ದ್ರೋಣ ತನ್ನ ಸಹಪಾಠಿಯೆಂದು ಏಕೆ ಗುರುತಿಸದಾದನು ?

☐ a) ಮದ್ಯಪಾನ ಮಾಡಿದ್ದರಿಂದ ☐ b) ಅಧಿಕಾರದ ಮದದಿಂದ

☐ c) ವಯಸ್ಸಾಗಿದ್ದರಿಂದ ☐ d) ಮರೆವಿನಿಂದ

14. ಪಂಪಮಹಾಕವಿ ವಿರಚಿತ 'ವಿಕ್ರಮಾರ್ಜುನವಿಜಯಂ' ಕಾವ್ಯವನ್ನು ಸಂಪಾದಿಸಿದವರು

☐ a) ಆರ್. ನರಸಿಂಹಾಚಾರ್ಯರು ☐ b) ಪು.ತಿ. ನರಸಿಂಹಾಚಾರ್ಯರು

☐ c) ಎ.ಎನ್. ಮೂರ್ತಿರಾವ್ ☐ d) ಡಿ.ಎಲ್. ನರಸಿಂಹಾಚಾರ್ಯರು

15. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಸುವರ್ಣ ಯುಗ' ಎಂದು ಕರೆಯಲಾಗುವ ಶತಮಾನ

☐ a) 9ನೇ ಶತಮಾನ ☐ b) 10ನೇ ಶತಮಾನ

☐ c) 12ನೇ ಶತಮಾನ ☐ d) 15ನೇ ಶತಮಾನ

www.esirikannada.com

16. ದ್ರೋಣನಿಗೆ ಬಡತನವು ಬರಲು ಸಹಾಯಕ್ಕಾಗಿ ಮೊದಲು ಯಾರ ಬಳಿಗೆ ಬಂದನು ?

☐ a) ದ್ರುಪದನ ಬಳಿಗೆ ☐ b) ಪರಶುರಾಮರ ಬಳಿಗೆ

☐ c) ಅಶ್ವತ್ಥಾಮನ ಬಳಿಗೆ ☐ d) ಕೃಷ್ಣನ ಬಳಿಗೆ

17. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ?

☐ a) ದಾನ ಕೊಡಲು ☐ b) ಶಸ್ತ್ರಗಳನ್ನು ಬೇಡಿಕೊಂಡು

☐ c) ದ್ರವ್ಯಾರ್ಥಿಯಾಗಿ ☐ d) ತಪಸ್ಸಿಗೆ ಕಳುಹಿಸಲು

18. ದ್ರೋಣನು ದ್ರವ್ಯಾರ್ಥಿಯಾಗಿ ಯಾರೊಡನೆ ಪರಶುರಾಮನ ಬಳಿಗೆ ಬಂದನು ?

☐ a) ದ್ರುಪದನೊಡನೆ ☐ b) ಪಡಿಯರನೊಂದಿಗೆ

☐ c) ಭ್ರಾಂತಿಯೊಡನೆ ☐ d) ಅಶ್ವತ್ಥಾಮನೊಡನೆ

19. ಕುಂಭಸಂಭವ ಎಂದು ಯಾರನ್ನು ಕರೆಯಲಾಗುತ್ತದೆ ?

☐ a) ಅಶ್ವತ್ಥಾಮನನ್ನು ☐ b) ದ್ರುಪದನನ್ನು

☐ c) ದ್ರೋಣಾಚಾರ್ಯರನ್ನು ☐ d) ಪರಶುರಾಮರನ್ನು

20. ದ್ರೋಣನು ದ್ರವ್ಯಾರ್ಥಿಯಾಗಿ ಬಂದಾಗ ಪರಶುರಾಮರು ಎಲ್ಲಿಗೆ ಹೊರಟಿದ್ದರು ?

- [ ] a) ತಪೋವನಕ್ಕೆ
- [ ] b) ಯುದ್ಧಕ್ಕೆ
- [ ] c) ದ್ರುಪದನ ಅರಮನೆಗೆ
- [ ] d) ಕೌರವನ ಅರಮನೆಗೆ

21. ನಾರುಮಡಿಯಿಂದ ಸುತ್ತಿದ ಸೊಂಟವುಳ್ಳವನಾಗಿ,ಜಡೆಯ ಸಮೂಹ ಗಳಿಂದ ಕೂಡಿದವನಾಗಿ ತಪೋವನಕ್ಕೆ ಹೊರಟವರು ಯಾರು ?

- [ ] a) ದ್ರೋಣಾಚಾರ್ಯರು
- [ ] b) ಪರಶುರಾಮರು
- [ ] c) ಯಜ್ಞಸೇನ ಮುನಿಗಳು
- [ ] d) ಅಶ್ವತ್ಥಾಮ

22. ದ್ರವ್ಯಾರ್ಥಿಯಾಗಿ ಬಂದ ದ್ರೋಣರನ್ನು ಪರಶುರಾಮರು ಯಾವುದರಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದರು ?

- [ ] a) ಮಣ್ಣಿನ ಪಾತ್ರೆಯಲ್ಲಿ
- [ ] b) ಚಿನ್ನದ ಪಾತ್ರೆಯಲ್ಲಿ
- [ ] c) ಬೆಳ್ಳಿಯ ಪಾತ್ರೆಯಲ್ಲಿ
- [ ] d) ಕಂಚಿನ ಪಾತ್ರೆಯಲ್ಲಿ

23. ದ್ರೋಣಾಚಾರ್ಯರಿಗೆ ಪರಶುರಾಮರು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣ

- [ ] a) ಬಡತನ ಬಂದಿದ್ದರಿಂದ
- [ ] b) ತಪಸ್ಸಿಗೆ ಹೊರಟಿದ್ದರಿಂದ
- [ ] c) ಕನಕ ಪಾತ್ರೆ ಇಲ್ಲದಿರುವುದರಿಂದ
- [ ] d) ದ್ರುಪದನು ವ್ಯಗ್ರಚಿತ್ತನಾಗಿದ್ದರಿಂದ

www.esirikannada.com

24. ಅಶ್ವತ್ಥಾಮನ ತಂದೆ ಯಾರು ?

- [ ] a) ಪರಶುರಾಮ
- [ ] b) ಯಜ್ಞಸೇನ
- [ ] c) ದ್ರೋಣಾಚಾರ್ಯರು
- [ ] d) ಭೀಷ್ಮಾಚಾರ್ಯರು

25. ಪರಶುರಾಮರನ್ನು ಭಾರ್ಗವ ಎಂದು ಕರೆಯಲು ಕಾರಣ

- [ ] a) ಭೃಗು ವಂಶದಲ್ಲಿ ಜನಿಸಿದವನಾಗಿದ್ದರಿಂದ
- [ ] b) ಭೃಂಗೋಧರ ಕಾಯಕಾಂತಿಯುಳ್ಳವನಾಗಿದ್ದರಿಂದ
- [ ] c) ಬ್ರಾಹ್ಮಣ ವಂಶದವನಾಗಿದ್ದರಿಂದ
- [ ] d) ಸಂಪತ್ತನ್ನೆಲ್ಲ ದಾನಮಾಡಿದ್ದರಿಂದ

26. ಪರಶುರಾಮರು ಒಡವೆಗಳನ್ನೆಲ್ಲ(ಸಂಪತ್ತನ್ನೆಲ್ಲ)ಯಾರಿಗೆ ಕೊಟ್ಟರು ?

☐ a) ದ್ರೋಣಾಚಾರ್ಯರಿಗೆ
☐ b) ಅಶ್ವತ್ಥಾಮನಿಗೆ
☐ c) ಬೇಡಿದವರಿಗೆ
☐ d) ಗುರುಗಳಿಗೆ

27. ಪರಶುರಾಮರು ಭೂಮಂಡಲವನ್ನು ಯಾರಿಗೆ ಕೊಟ್ಟರು ?

☐ a) ದ್ರೋಣಾಚಾರ್ಯರಿಗೆ
☐ b) ಅಶ್ವತ್ಥಾಮನಿಗೆ
☐ c) ಬೇಡಿದವರಿಗೆ
☐ d) ಗುರುಗಳಿಗೆ

28. ಪರಶುರಾಮರ ಗುರುಗಳು ಯಾರು ?

☐ a) ಪ್ರಜಾಪತಿ ಕಶ್ಯಪ ಮುನಿಗಳು
☐ b) ಮತಂಗ ಮುನಿಗಳು
☐ c) ದ್ರೋಣಾಚಾರ್ಯರು
☐ d) ವಾಲ್ಮೀಕಿ ಮುನಿಗಳು

29. "ಈಗಳೊಂದಡಿಕೆಯುಮಿಲ್ಲ ಕೈಯೊಳ್ " - ಈ ವಾಕ್ಯವನ್ನು ಹೇಳಿದವರು

☐ a) ಪರಶುರಾಮರು
☐ b) ದ್ರೋಣಾಚಾರ್ಯರು
☐ c) ದ್ರುಪದ
☐ d) ಪಡಿಯರ

30. ಶಾಸ್ತ್ರಪಾರಂಗತನಾದ ದ್ರೋಣಾಚಾರ್ಯರನ್ನು ಹೇಗೆ ಸಂತಸಪಡಿಸಲಿ ಎಂದು ಹೇಳಿದವರು

☐ a) ದ್ರುಪದ
☐ b) ಅಶ್ವತ್ಥಾಮ
☐ c) ಪರಶುರಾಮ
☐ d) ಪಡಿಯರ

31. ಪರಶುರಾಮರ ಬಳಿ ಇದ್ದವುಗಳು

☐ a) ಭೂಮಂಡಲ ಮತ್ತು ಒಡವೆಗಳು
☐ b) ಕನಕ ಪಾತ್ರೆ ಮತ್ತು ಕಂಚಿನ ಪಾತ್ರೆ
☐ c) ಧನಸ್ಸು ಮತ್ತು ದಿವ್ಯವಾದ ಶರಗಳ ಸಮೂಹ
☐ d) ಅರಮನೆ ಮತ್ತು ಆನೆ

32. ದ್ರೋಣರಿಗೆ ಯಾವುದು ಧನ(ಸಂಪತ್ತು)ವಾಗಿತ್ತು ?

☐ a) ಧನಸ್ಸು
☐ b) ವಿದ್ಯೆ
☐ c) ಶರ
☐ d) ಕಳ್ಳು

www.esirikannada.com

33. ಪರಶುರಾಮರು ದ್ರೋಣರಿಗೆ ಕೊಟ್ಟ ಪ್ರಧಾನವಾದ ಅಸ್ತ್ರಗಳು

- [ ] a) ವಾರುಣ ಅಸ್ತ್ರ
- [ ] b) ವಾಯುವ್ಯ ಅಸ್ತ್ರ
- [ ] c) ಆಗ್ನೇಯ ಮತ್ತು ಪೌರಂದರ ಅಸ್ತ್ರಗಳು
- [ ] d) ಈ ಎಲ್ಲಾ ಅಸ್ತ್ರಗಳು

34. ದ್ರೋಣಾಚಾರ್ಯರ ಬಾಲ್ಯದ ಗೆಳೆಯ

- [ ] a) ಪರಶುರಾಮ
- [ ] b) ದ್ರುಪದ
- [ ] c) ಯಜ್ಞಸೇನ
- [ ] d) ಭಾರ್ಗವ

35. ದ್ರೋಣಾಚಾರ್ಯರ ಬಾಲ್ಯದ ಗೆಳೆಯ ದ್ರುಪದ ಎಲ್ಲಿ ಅರಸನಾಗಿದ್ದನು ?

- [ ] a) ಛತ್ರಾವತಿಯಲ್ಲಿ
- [ ] b) ಅಯೋಧ್ಯೆಯಲ್ಲಿ
- [ ] c) ಉಜ್ಜಯಿನಿಯಲ್ಲಿ
- [ ] d) ಹಸ್ತಿನಾವತಿಯಲ್ಲಿ

36. "ನಿಮ್ಮ ಒಡನಾಡಿ ಗೆಳೆಯನಾದ ದ್ರೋಣ ಎಂಬ ಪಾರ್ವನು ಬಂದಿದ್ದಾನೆಂದು ನಿಮ್ಮ ಅರಸನಿಗೆ ತಿಳಿಸು" ಎಂದು ಯಾರು ಯಾರಿಗೆ ಹೇಳಿದರು ?

- [ ] a) ದ್ರುಪದ - ಪಡಿಯರನಿಗೆ
- [ ] b) ದ್ರೋಣ - ಪಡಿಯರನಿಗೆ
- [ ] c) ಪರಶುರಾಮ - ದ್ರೋಣನಿಗೆ
- [ ] d) ದ್ರೋಣ - ದ್ರುಪದನಿಗೆ

37. "ವಿದ್ಯಾಧನಮೆ ಧನಮಪ್ಪುದು" -ಈ ಮಾತನ್ನು ಯಾರು ಯಾರಿಗೆ ಹೇಳಿದರು ?

- [ ] a) ಪರಶುರಾಮ - ದ್ರೋಣರಿಗೆ
- [ ] b) ದ್ರೋಣ - ಪರಶುರಾಮರಿಗೆ
- [ ] c) ಅಶ್ವತ್ಥಾಮ - ದ್ರೋಣನಿಗೆ
- [ ] d) ದ್ರೋಣ - ದ್ರುಪದನಿಗೆ

38. ದ್ರೋಣರು ದ್ರುಪದನು ಅರಮನೆಯ ಬಾಗಿಲೊಳು ನಿಂತು ಯಾರನ್ನು ಕರೆದರು ?

- [ ] a) ಪರಶುರಾಮರನ್ನು
- [ ] b) ಅಶ್ವತ್ಥಾಮನನ್ನು
- [ ] c) ಪಡಿಯರನನ್ನು
- [ ] d) ದ್ರುಪದನನ್ನು

39. "ದ್ರೋಣ ಎಂಬುವವನು ಪಾರ್ವನೆ ? ಅವನು ನನಗೆ ಹೇಗೆ ಗೆಳೆಯ ! ಅವನಾರೆಂಬುದನ್ನು ತಿಳಿಯನು ;ನೂಕು ಅಂಥವನನ್ನು - ಎಂದು ಯಾರು ಹೇಳಿದರು ?

- [ ] a) ಪರಶುರಾಮ
- [ ] b) ಪಡಿಯರ
- [ ] c) ದ್ರುಪದ
- [ ] d) ದ್ರೋಣಚಾರ್ಯ

www.esirikannada.com

40. "ನೀನು-ನಾನು ಜೊತೆಯಲ್ಲಿ ಓದಿದೆವು ಎಂಬುದನ್ನು ತಿಳಿಯಿರೇ ಅಣ್ಣ"- ಎಂದು ಯಾರು ಯಾರಿಗೆ ಹೇಳಿದರು ?

- [ ] a) ದ್ರೋಣ - ದ್ರುಪದನಿಗೆ
- [ ] b) ದ್ರುಪದ - ದ್ರೋಣನಿಗೆ
- [ ] c) ದ್ರೋಣ - ಪರಶುರಾಮರಿಗೆ
- [ ] d) ಪರಶುರಾಮ - ದ್ರೋಣರಿಗೆ

41. "ರಾಜನಿಗೂ ಬ್ರಾಹ್ಮಣರಿಗೂ ಹೇಗೆ ಗೆಳೆತನ ? ಮನುಷ್ಯರಾದವರು ಇಷ್ಟೊಂದು ನಾಚಿಕೆ ಕೆಟ್ಟವರಾಗುತ್ತಾರೆಯೇ " - ಎಂದು ಯಾರು ಯಾರನ್ನು ಹೀಯಾಳಿಸಿದರು ?

- [ ] a) ದ್ರೋಣ - ದ್ರುಪದನಿಗೆ
- [ ] b) ದ್ರುಪದ - ದ್ರೋಣನಿಗೆ
- [ ] c) ದ್ರೋಣ - ಪರಶುರಾಮರಿಗೆ
- [ ] d) ಪರಶುರಾಮ - ದ್ರೋಣರಿಗೆ

42. ದ್ರೋಣಾಚಾರ್ಯರು ಹೇಳಿದಂತೆ ಐಶ್ವರ್ಯ ಬಂದಾಗ ಮನುಷ್ಯರ ವರ್ತನೆಗಳು ಹೇಗಾಗುತ್ತವೆ ?

- [ ] a) ಮದ್ಯ ಕುಡಿದವರ ರೀತಿ ಮಾತುಗಳು ತೊದಲಾಗುತ್ತವೆ.
- [ ] b) ಮುಖದಲ್ಲಿ ವಕ್ರ ಚೇಷ್ಟೆ ಉಂಟಾಗುತ್ತದೆ.
- [ ] c) ಮಾತುಗಳು ನಾಚಿಕೆ ಇಲ್ಲದಂತಾಗಿ ಬಾಂಧವ್ಯವನ್ನು ಮರೆಯುವಂತೆ ಮಾಡುತ್ತವೆ.
- [ ] d) ಎಲ್ಲಾ ರೀತಿಯ ವರ್ತನೆಗಳು ಉಂಟಾಗುತ್ತವೆ.

www.esirikannada.com

43. ಸಿರಿ ಯಾವುದರೊಡನೆ ಹುಟ್ಟಿದ್ದು

- [ ] a) ಕಳ್ಳಿನೊಡನೆ(ಹೆಂಡ)
- [ ] b) ಭೂಮಿಯೊಡನೆ
- [ ] c) ಸಮುದ್ರದೊಡನೆ
- [ ] d) ಮರದೊಡನೆ

44. ನೊಣಕ್ಕೆ ಯಾವುದು ಶ್ರೇಷ್ಠ ?

- [ ] a) ಅನ್ನ
- [ ] b) ಹೆಂಡ
- [ ] c) ಸಿರಿ
- [ ] d) ತಿಪ್ಪೆ

45. "ದುಷ್ಟ ನೊಣಕ್ಕೆ ತಿಪ್ಪೆಯೇ ಶ್ರೇಷ್ಠ ಎಂಬಂತೆ ನಿನ್ನ ಯೋಗ್ಯತೆ(ಪರಾಕ್ರಮ)ನನ್ನವರೆಗೂ ಉಂಟೆ ? ಎಂದು ಯಾರು ಯಾರಿಗೆ ಹೇಳಿದರು ?

- [ ] a) ದ್ರೋಣ - ದ್ರುಪದನಿಗೆ
- [ ] b) ದ್ರುಪದ - ದ್ರೋಣನಿಗೆ
- [ ] c) ದ್ರೋಣ - ಪರಶುರಾಮರಿಗೆ
- [ ] d) ಪರಶುರಾಮ - ದ್ರೋಣರಿಗೆ

46. "ನಿರಾಯಾಸವಾಗಿ ಎನ್ನ ಶಿಷ್ಯರಿಂದ ಗಾಬರಿ ಪಡುವಂತೆ ನಿನ್ನನ್ನು ಕಟ್ಟಿಸಿದೆ ಬಿಟ್ಟರೆ ಸುಮ್ಮನೆ ಮೀಸೆವೊತ್ತನೆ "- ಎಂದು ಯಾರು ಯಾರ ಮೇಲೆ ಪ್ರತಿಜ್ಞೆ ಮಾಡಿದರು ?

- [ ] a) ದ್ರುಪದ -ದ್ರೋಣನನ್ನು ಮೇಲೆ
- [ ] b) ದ್ರೋಣ - ದ್ರುಪದನ ಮೇಲೆ
- [ ] c) ದ್ರೋಣ - ಪಡಿಯರನ ಮೇಲೆ
- [ ] d) ಅಶ್ವತ್ಥಾಮ - ದ್ರುಪದನ ಮೇಲೆ

47. ಸಭಾವಲಯದಲ್ಲಿ ದ್ರೋಣನನ್ನು ಹೀಯಾಳಿಸಿದವರು

- [ ] a) ಪರಶುರಾಮ
- [ ] b) ಪಡಿಯರ (ಸೇವಕ)
- [ ] c) ದ್ರುಪದ
- [ ] d) ಅಶ್ವತ್ಥಾಮ

48. " ಜಲಕ್ಕನೀಗಳರಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ " (ವಿಶದವಾಗಿ ತಟ್ಟನೆ ಅರಿತೆನು ಸಿರಿ ಹೆಂಡದೊಡನೆ ಹುಟ್ಟಿತು ಎಂಬುದನ್ನು) - ಈ ಮಾತನ್ನು ಯಾರು ಯಾರಿಗೆ ಹೇಳಿದರು ?

- [ ] a) ದ್ರೋಣ - ದ್ರುಪದನಿಗೆ
- [ ] b) ದ್ರುಪದ - ದ್ರೋಣನಿಗೆ
- [ ] c) ದ್ರೋಣ - ಪರಶುರಾಮರಿಗೆ
- [ ] d) ಪರಶುರಾಮ - ದ್ರೋಣರಿಗೆ

www.esirikannada.com

49. "ನೊಳವಿಂಗೆ ಕುಪ್ಪೆ ವರಂ" ಈ ವಾಕ್ಯದ ಸರಿಯಾದ ಅರ್ಥ

- [ ] a) ನೊಣಕ್ಕೆ ತಿಪ್ಪೆಯೇ ಶ್ರೇಷ್ಠ
- [ ] b) ನೋಡಲು ತಿಪ್ಪೆ ವಾಸನೆ
- [ ] c) ನೊಣಕ್ಕೆ ತಿಪ್ಪೆಯಾಗುವ ವರವಿದೆ
- [ ] d) ನೊಣ ಮತ್ತು ತಿಪ್ಪೆ ವರ -ವಧುಗಳು

50. "ಜೊತೆಯಲ್ಲಿ ಓದಿದೆವು ಎಂಬ ಕಾರಣದಿಂದ ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ" ಎಂದು ಯಾರು ಯಾರಿಗೆ ಹೇಳಿದರು ?

- [ ] a) ದ್ರೋಣ - ದ್ರುಪದನಿಗೆ
- [ ] b) ದ್ರುಪದ - ದ್ರೋಣನಿಗೆ
- [ ] c) ದ್ರೋಣ - ಪಡಿಯರನಿಗೆ
- [ ] d) ಅಶ್ವತ್ಥಾಮ - ದ್ರುಪದನಿಗೆ

## Answer Key

| | | | | | | | |
|---|---|---|---|---|---|---|---|
| 1. | b | 14. | d | 27. | d | 40. | a |
| 2. | b | 15. | b | 28. | a | 41. | b |
| 3. | b | 16. | b | 29. | a | 42. | d |
| 4. | b | 17. | c | 30. | c | 43. | a |
| 5. | b | 18. | d | 31. | c | 44. | d |
| 6. | a | 19. | c | 32. | b | 45. | a |
| 7. | d | 20. | a | 33. | d | 46. | b |
| 8. | a | 21. | b | 34. | b | 47. | c |
| 9. | b | 22. | a | 35. | a | 48. | a |
| 10. | a | 23. | c | 36. | b | 49. | a |
| 11. | b | 24. | c | 37. | b | 50. | a |
| 12. | c | 25. | a | 38. | c | | |
| 13. | b | 26. | c | 39. | c | | |

www.esirikannada.com